# ಅಮ್ಮಾ, ನನ್ನ ಅಳಲು ಯಾರ ಮುಂದೆ ಹೇಳಲಿ...


ಬಾಲ್ಯದಲ್ಲಿ ನಾನು ಭಾರೀ ಉಡಾಳ. ಆಟದಲ್ಲಿ ಜಗಳ, ತಂಗಿಯರ ತಿಂಡಿ ಕಸಿದು ಅವರ ಜಡೆ ಹಿಡಿದೆಳೆಯುವುದು, ಮರೆಯಲ್ಲಿ ನಿಂತು ಅವರಿಗೆ ಹೆದರಿಸುವುದು ಇವೆಲ್ಲ ನನ್ನ ಕಲ್ಯಾಣ ಗುಣಗಳು! ಆಗೆಲ್ಲ ನನ್ನ ವಾತ್ಸಲ್ಯಮಯಿ ಅಮ್ಮ ಅಳುತ್ತಿದ್ದಳು. ಅಂತರ್ಯಾದಲ್ಲಿ ಅದೆಷ್ಟೇ ಕೋಪ ಬಂದರೂ ಪ್ರಾಂಜಲ ಮಾತೃಪ್ರೇಮದಿಂದ ಮುದ್ದಿಸಿ ಪಾರಮ್ಯ ತೋರುತ್ತಿದ್ದಳು.

ನಾನು ತಪ್ಪು ಮಾಡಿದಾಗ ಅಪ್ಪ ಉಗ್ರಸ್ವರೂಪಿಯಾಗಿ ಮಜ್ಜಿಗೆ ಕಡೆಯುವ ಹಗ್ಗದಿಂದ ಬೆನ್ನಿಗೆ ಬಾಸುಂಡೆ ಮೂಡಿಸಿದಾಗ ಅವರು ಅತ್ತ ಹೋದ ನಂತರ ನನ್ನನ್ನಪ್ಪಿ 'ಯಾಕೆ ಹೀಗೆ ಮಾಡ್ತೀ ಮಗಾ? ಯಾವಾಗ ನಿನಗೆ ಬುದ್ಧಿ ಬರೋದು? ನಾನು ಸತ್ತ ಮೇಲಾ...?' ಎಂದು ಸೆರಗು ಒದ್ದೆ ಮಾಡುತ್ತಿದ್ದಳು. ಹುಡುಗುಬಟ್ಟೆ ವಯಸ್ಸು. ಆಗ ನನಗೆ ಅರಿವಾಗಿರಲಿಲ್ಲ.

8ನೇ ತರಗತಿಗೆ ಪ್ಯಾಂಟ್ ಮೇಲೇರಿಸಿ ಹೈಸ್ಕೂಲ್ ಒಳಹೊಕ್ಕಾಗ ಬುದ್ಧಿ ಬಲಿಯಲಾರಂಭಿಸಿತ್ತು. ಅಮ್ಮನನ್ನು ನೋಯಿಸಿದ ತಪ್ಪು ಅರಿವಾಗಿತ್ತು. ಅಷ್ಟರಲ್ಲಾಗಲೇ ಅಮ್ಮ ಗರ್ಭಕೋಶದ ಕಾಯಿಲೆಗೆ ತುತ್ತಾಗಿ ಆಸ್ಪತ್ರೆ ಸೇರಿ ಮೊದಲು ದಾವಣಗೆರೆ, ನಂತರ ಮಣಿಪಾಲ ಆಸ್ಪತ್ರೆಗೆ ದಾಖಲಾಗಿಯಾಗಿತ್ತು. ಆಗೆಲ್ಲ ಪಕ್ಕದಲ್ಲೇ ಕುಳಿತು ತಪ್ಪೊಪ್ಪಿಗೆ ಒಪ್ಪಿಸಿ ಕ್ಷಮೆ ಯಾಚಿಸಲು ಅದೆಷ್ಟೋ ಬಾರಿ ಯೋಚಿಸಿದ್ದೆ. ಆದರೆ ಅಮ್ಮನ ಆರೋಗ್ಯ ಸುಧಾರಿಸಲಿ ಎಂದು ಕಾದಿದ್ದೆ. ಭಗವಂತನ ಎಣಿಕೆಯೇ ಬೇರೆ ಇತ್ತು! ಅಮ್ಮನ ಆರೋಗ್ಯ ಉಲ್ಬಣಗೊಂಡು ಕೋಮಾಕ್ಕೆ ಹೋದಳು. ಪಕ್ಕದಲ್ಲೇ ಕುಳಿತು ಅಮ್ಮನ ಮುಖವನ್ನೇ ವಿಷಾದದಿಂದ ವೀಕ್ಷಿಸುತ್ತಿದ್ದೆ. ಒಂದು ಬಾರಿ ಅಮ್ಮ ಮಾತಾಡುವಂತಾಗಿ ನಾನು ಹೇಳಬೇಕಾದುದನ್ನೆಲ್ಲ ಕೇಳಿದರೆ ಸಾಕು ಎಂದು ಚಾತಕಪಕ್ಷಿಯಂತೆ ಕಾದೆ. ಅಂದೇ ರಾತ್ರಿ ಒಮ್ಮೆಲೇ ಪ್ರಜ್ಞೆಗೊಂಡ ಅಮ್ಮ ನನ್ನ ಕೈಹಿಡಿದು ನೋಡಿ ಏನನ್ನೋ ಹೇಳಲು ಬಾಯಿ ತೆರೆದು ಮರುಕ್ಷಣ ಜೀವನ್ಮುಕ್ತಳಾಗಿದ್ದಳು. ಹೇಳಬೇಕೆಂದು ಗಂಟಲಲ್ಲಿ ಸಂಗ್ರಹಿಸಿದ್ದ ಮಾತುಗಳೆಲ್ಲ ಹೊರಬಾರದಾದವು!

ನನ್ನಮ್ಮ, ನನ್ನ ತಪ್ಪುಗಳನ್ನು ಕ್ಷಮಿಸು ಎಂದು ಯಾರನ್ನು ಕೇಳಲಮ್ಮ? ಇಂದಿಗೂ ಎದೆಯ ಮೂಲೆಯಲ್ಲಿ ಕುಟುಕಿದಂತಾಗಿ ಕಣ್ಣು ಹನಿಗೂಡುತ್ತವೆ.

—ಕೆ. ಶ್ರೀನಿವಾಸರಾವ್, ಹರಪನಹಳ್ಳಿ



# ಗೆಳತಿಯಲ್ಲಿ ಹೇಳದೇ ಉಳಿದು ಹೋದ ಮಾತು

ಸುಮಾರು ವರುಷಗಳ ಮಾತು. ನನ್ನ ಗೆಳತಿಗೆ ನಾನೆಂದರೆ ವ್ಯಾಮೋಹ. ಯಾವಾಗಲು ಫೋನಾಯಿಸಿ 'ಹೇಗಿದ್ದೀಯ' ಎಂದು ಕೇಳಿ ನನ್ನ ಆರೋಗ್ಯದ ಬಗ್ಗೆ ಕಾಳಜಿವಹಿಸುತ್ತಿದ್ದಳು. ಏಕ್ ದಮ್ ಫೋನೇ ಬಾರದೇ ಇರುವುದಕ್ಕೆ ಏನೋ ಕಾರಣ ಇರಬಹುದೆಂದುಕೊಂಡು, ಇನ್ನೆರಡು ವಾರಗಳಲ್ಲಿ ನನ್ನ ಕಿಮೋಥೆರಪಿ ಮುಗಿದ ನಂತರ ಅವಳ ಮನೆಗೆ ಹೋಗುವುದೆಂದುಕೊಂಡರೆ, ಕೆಮ್ಮು ಜ್ವರ ಹಾಗೂ ಕೂದಲು ಉದುರುವುದಕ್ಕೆ ಶುರು. ಹೊರಗಡೆ ಬರಲಾಗದೆ ಒದ್ದಾಡುತ್ತಿದ್ದ ಸಮಯ.

ಗೆಳತಿಯ ಬಳಿ ನನ್ನ ಅಳಲು, ನೋವು ಹೇಳಿ ಸಾಂತ್ವನ ಸಿಗಬಹುದೇನೋ ಎಂಬ ಭಾವನೆ. ಪುನಃ ನನ್ನ ಆಸ್ಪತ್ರೆ ಭೇಟಿ. ಅದೇ ಸಮಯ ಗೆಳತಿನೂ ಆಸ್ಪತ್ರೆ ಸೇರಿದಾಳೆ ಅಂತ ವಿಷಯ ತಿಳಿದು ಆಸ್ಪತ್ರೆಗೆ ಹೋದೆ. ಐಸಿಯುನಲ್ಲಿ ಅಂಗಾತ ಮಲಗಿರುವುದು ನೋಡಿ ಅಂದು ದುಃಖ ಉಮ್ಮಳಿಸಿತು. ಅವಳು ನನ್ನನ್ನು ನೋಡಬಾರದೆಂದು ನನ್ನ ಮನಸ್ಸಿನಲ್ಲಿ ಇತ್ತು. ಫೋನ್ನಲ್ಲಿ ಕ್ಯಾನ್ಸರ್ ಆಗಿದೆ ಅಂತ ವಿಷಯ ತಿಳಿಸಬೇಕಿತ್ತು ಅಷ್ಟೇ. ಸುಮಾರು ದಿನಗಳ ನಂತರ ಅವಳು ಮನೆಗೆ ಹೋದಳು. ಆವಾಗ ನನ್ನ ಆರೋಗ್ಯ ಇನ್ನೂ ಕ್ಷೀಣಿಸಿತ್ತು. ಒಂದೆರಡು ದಿನದ ನಂತರ ಹೋಗಿಯೇಬಿಟ್ಟಳು. ಸುದ್ದಿ ಕೇಳಿ ತುಂಬಾ ಮರುಗಿಬಿಟ್ಟೆ. ಕಡೆಗೂ ನನ್ನ ನೋವು ಅವಳಿಗೆ ತಿಳಿಸಲು ಆಗಲೇ ಇಲ್ಲವಲ್ಲ ಎಂಬ ಭಾವನೆ ಇನ್ನೂ ನನ್ನ ಮನಸ್ಸಿನಲ್ಲಿ ಉಳಿದು ಹಪಹಪಿಸುವಂತಾಗಿದೆ. ದಿನಾಲೂ ನನ್ನ ಬಗ್ಗೆ ವಿಚಾರಿಸುತ್ತಿದ್ದವಳಿಗೆ ನನ್ನ ವಿಷಯ ಗೊತ್ತಾಗಿದ್ದರೆ ಮುಂದೆ ಏನು ಪರಿಣಾಮ ಆಗುತಿತ್ತೋ...

—ಹೀರಾ ರಮಾನಂದ್, ಬೆಂಗಳೂರು



## ಬಟವಾಡೆಯಾಗದ ಪ್ರೇಮಪತ್ರ

'ಸೋಲುವುದೇ ಪ್ರೀತಿಯಲ್ಲಿ ಗೆಲುವು' ಎಂಬ ಮಾತಿದೆ. ಪ್ರೇಮಿಗಳ ನಡುವೆ ವಿನಿಮಯವಾಗುವ ಕಣ್ಣ ನೋಟಗಳು, ತುಟಿಯಂಚಿನಲ್ಲಿ ಕಾಣಿಸಿಕೊಳ್ಳುವ ಮುಗುಳುನಗು, ನವಿರಾದ ಭಾವಗಳು ಎದೆಯಲ್ಲಿ ಪ್ರೀತಿಯ ದೀಪ ಹೊತ್ತಿಸುವ ರಾಯಭಾರಿಗಳು. ತಾವು ಇಷ್ಟಪಟ್ಟವರಿಗೆ, ಪ್ರೀತಿಸಿದವರಿಗೆ ತಮ್ಮ ಪ್ರೀತಿಯನ್ನು ನಿವೇದನೆ ಮಾಡಿಕೊಳ್ಳಲು, ತಮ್ಮ ಹೃದಯದ ಪಿಸುಮಾತುಗಳನ್ನು ದಾಟಿಸಲು ಪ್ರೇಮಪತ್ರವೆಂಬ ಮಾಧ್ಯಮ ಎಲ್ಲ ಕಾಲಕ್ಕೂ ಪ್ರಸ್ತುತವೇ. ಆದರೆ ಎಷ್ಟೋ ಬಾರಿ ತಮ್ಮ ಪ್ರೀತಿಯನ್ನು ನಿವೇದಿಸಿಕೊಳ್ಳಲು ಸಾಧ್ಯವಾಗದ ಸಂದರ್ಭಗಳೇ ಹೆಚ್ಚಾಗಿರುತ್ತವೆ. ತಮ್ಮ ಮನದ ಮಾತುಗಳನ್ನು ತೆರೆದಿಡಲು ಪ್ರೇಮಪತ್ರವನ್ನು ಬರೆದಿದ್ದರೂ ಅದನ್ನು ನೀಡಲಾಗದೇ ಹಾಗೆಯೇ ಪ್ರೀತಿಯ ಕನಸೊಂದು ಮನದಲ್ಲೇ ಉಳಿದು ಹೋಗುವುದೂ ಉಂಟು. ನಿಮ್ಮ ಜೀವನದಲ್ಲಿಯೂ ಅಂಥ ಸನ್ನಿವೇಶ ನಡೆದಿದ್ದರೆ, ಬರೆದ ಪ್ರೇಮಪತ್ರವೊಂದು ಬಟವಾಡೆಯಾಗದೆ ಉಳಿದಿದ್ದರೆ, ಆ ಸಂಗತಿಯನ್ನು 'ಸುಧಾ'ದೊಂದಿಗೆ ಹಂಚಿಕೊಳ್ಳಬಹುದು. ಬರಹ 150ರ ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಫೆಬ್ರುವರಿ 15. ಲೇಖನವನ್ನು ನುಡಿ ಅಥವಾ ಯುನಿಕೋಡ್‌ನಲ್ಲಿ editorsu@sudha.co.inಗೆ ಇಮೇಲ್ ಮಾಡಿ.